**ಸಾಕ್ಷಿಗೆ ದಿನಾಂಕ 05-02-2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

ಮುಂದುವರೆದ ಮುಖ್ಯ ವಿಚಾರಣೆ: ಅರ್ಜಿದಾರರ ಪರ ಶ್ರೀ.ಎಂ ಎ ವಕೀಲರಿಂದಃ

ಸಾಕ್ಷಿಹಾಜರು ಮಾಡಿದ ದಾಖಲಾತಿಗಳನ್ನು ಈ ಕೆಳಕಂಡಂತೆ ನಿಶಾನಿಕರಿಸಲಾಗಿರುತ್ತದೆ.:

| | |
|---|---|
| ನಿ.ಪಿ 21 | ಡಿಸ್ಚಾರ್ಜ್ ಸಮ್ಮರಿ |
| ನಿ.ಪಿ 22 | ಒಳರೋಗಿ ಬಿಲ್ಲು |
| ನಿ.ಪಿ 23 | 3 ಲ್ಯಾಬ್ ವರದಿಗಳು |
| ನಿ.ಪಿ 24 | 2 ಹಣ ಪಾವತಿ ರಶೀದಿಗಳು |
| ನಿ.ಪಿ 25 | ಹೊರರೋಗಿ ಬಿಲ್ಲು |
| ನಿ.ಪಿ 26 | 2 ಎಂ ಆರ್ ಐ ವರದಿಗಳು |
| ನಿ.ಪಿ 27 | ಸಿಟಿ ಸ್ಕಾನ್ ಬಿಲ್ಲು |
| ನಿ.ಪಿ 28 | 3 ಎಕ್ಸ್ ರೇಗಳು |

3. ನನ್ನ ಮುಖ್ಯ ವಿಚಾರಣೆ ಸಾಕ್ಷ್ಯ ಹಾಗೂ ದಾಖಲಾತಿಗಳನ್ನು ಪರಿಶೀಲಿಸಿ ಪ್ರಕರಣದಲ್ಲಿ ಕೋರಿರುವ ಪರಿಹಾರವನ್ನು ನೀಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

ಮುಂದುವರೆದ ಪಾಟೀಸವಾಲುಃ **1 ನೇ ಎದುರುದಾರರ ಪರವಾಗಿ ಶ್ರೀಮತಿ ಎಸ್ ಎಂ ವಕೀಲರು ಶ್ರೀ ಎ ಎನ್ ಹೆಚ್ ವಕೀಲರ ಪರವಾಗಿಃ**

1. ಶ್ರೀ ಧರ್ಮಸ್ಥಳ ಆಸ್ಪತ್ರೆಯಲ್ಲಿ 9-10 ದಿನಗಳ ಕಾಲ ಚಿಕಿತ್ಸೆಗೆ ದಾಖಲಾಗಿದ್ದೇನು. ಬೇರೆ ಆಸ್ಪತ್ರೆಗೆ ಹೋಲಿಸಿದರೆ ಚಿಕಿತ್ಸೆಯ ಶುಲ್ಕ ಕಡಿಮೆ ಇರುತ್ತದೆ ಎಂದರೆ ಸರಿ. ಸದರಿ ಆಸ್ಪತ್ರೆಯಲ್ಲಿ ನಾನು ಆರ್ಯುವೇದ ಚಿಕಿತ್ಸೆ ಪಡೆದಿರುತ್ತೇನೆ. ಯಾವುದೇ ಆರೋಗ್ಯ ಕಾರ್ಡ್ ಮಾಡಿಸಿಲ್ಲ. ಸದರಿ ಆಸ್ಪತ್ರೆಯಲ್ಲಿ ನನಗೆ ಔಷಧಿಗಳನ್ನು ತೆಗೆದುಕೊಳ್ಳಲು ಸಲಹೆ ನೀಡಿರುತ್ತಾರೆ. ಸದರಿ ಔಷಧಿಗಳ ಸಲಹೆ ಚೀಟಿಯನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ಮುಂದುವರೆದ ಚಿಕಿತ್ಸೆಗೆ ಹಣ ಹೊಂದಿಸಲು ಆಗದೇ

ಇದ್ದ ಕಾರಣ ನಾನು ಮುಂದುವರೆದ ಚಿಕಿತ್ಸೆ ಪಡೆದುಕೊಂಡಿರುವುದಿಲ್ಲ. ನಾನು ಹೇಳಿದಷ್ಟು ವೈದ್ಯಕೀಯ ವೆಚ್ಚ ರೂ.25,000/- ಆಗಿರುವುದಿಲ್ಲ ಎಂದರೆ ಸರಿಯಲ್ಲ.

2. ನಾನು ಆಸ್ಪತ್ರೆಯಿಂದ ಬಿಡುಗಡೆ ಹೊಂದುವಾಗ ನನ್ನ ಆರೋಗ್ಯದಲ್ಲಿ ಸುಧಾರಣೆ ಆಗಿರುತ್ತದೆ ಎಂದರೆ ಸರಿಯಲ್ಲ. ಇತ್ತೀಚಿಗೆ 5 ದಿನಗಳ ಹಿಂದೆ ನಾನು ವಿಪಿ ಮ್ಯಾಗ್ನಸ್ ಆಸ್ಪತ್ರೆಗೆ ಮುಂದುವರೆದ ಚಿಕಿತ್ಸೆಗೆ ಹೋಗಿರುತ್ತೇನೆ. ಸದರಿ ದಾಖಲೆಯನ್ನು ಆಸ್ಪತ್ರೆಗೆ ಹಾಜರುಪಡಿಸಲು ತೊಂದರೆ ಇಲ್ಲ ಎಂದರೆ ಸರಿ. ಹೆಚ್ಚಿನ ಪರಿಹಾರ ಪಡೆಯುವ ಉದ್ದೇಶದಿಂದ ನಿಪಿ.21 ರಿಂದ 28 ರ ದಾಖಲೆಗಳನ್ನು ಸೃಷ್ಟಿಸಿ ಹಾಕಿರುತ್ತೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 2 ನೇ ಎದುರುದಾರರು ಮತ್ತು ಅವರ ಪರ ವಕೀಲರು ಗೈರುಹಾಜರು. ಈ ಕಾರಣದಿಂದ ಪಾಟೀ ಸವಾಲು ಇರುವುದಿಲ್ಲ ಎಂದು ತೆಗೆದುಕೊಳ್ಳಲಾಯಿತು.**

**ಮರು-ವಿಚಾರಣೆಃ ಇಲ್ಲ.**

**(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ.)**

**(ಓ. ಹೇ. ಕೇ. ಸ.ಇ)**

**3ನೇ ಹೆಚ್ಚುವರಿ ಲಘು ವ್ಯವಹಾರಗಳ**
**ನ್ಯಾಯಾಧೀಶರು, ಬೆಂಗಳೂರು.**